ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೆ, ದಿನಾಂಕ ೨೯-೩-೧೯೮೫ರಂದು ರಾತ್ರಿ ೧೨-೩೦ರ ಸಮಯದಲ್ಲಿ ಸಿರವಾರ ಗ್ರಾಮದ ಬಸ್ ಠಾಣೆಯ ಹತ್ತಿರ ಆಕಸ್ಮಾತ್ತಾಗಿ ಬೆಂಕಿ ಕಾಣಿಸಿಕೊಂಡಿತು. ಈ ಅನಾಹುತಕ್ಕೆ ಕಾರಣವನ್ನು ತನಿಖೆ ಮಾಡಲಾಗುತ್ತಿದೆ. ಈ ಅನಾಹುತದಲ್ಲಿ ೨೯ ಗುಡಿಸಲುಗಳು ಮತ್ತು ಅಂಗಡಿಗಳು ಸುಟ್ಟು ಭಸ್ಮವಾದವು ಈ ಸುದ್ದಿ ಪೋಲೀಸರಿಗೆ ತಿಳಿದ ಕೂಡಲೇ ಅವರು ಸ್ಥಳಕ್ಕೆ ಧಾವಿಸಿ ಸಾರ್ವಜನಿಕರ ಮತ್ತು ಅಗ್ನಿಶಾಮಕ ಯಂತ್ರೋಪಕರಣದ ಸಹಾಯದಿಂದ ಬೆಂಕಿಯನ್ನು ಆರಿಸಿದರು. ಈ ಅನಾಹುತದಿಂದ ಸುಮಾರು ೪೩,೬೭೩ ರೂಪಾಯಿಗಳಷ್ಟು ನಷ್ಟ ಉಂಟಾಗಿದೆಯೆಂದು ಅಂದಾಜು ಮಾಡಲಾಗಿದೆ. ಈ ಅನಾಹುತದಲ್ಲಿ ಶಂಕರಪ್ಪನ ಮಗಳಾದ ಐದು ವರ್ಷದ ಭಾರತಿ ಎಂಬ ಹೆಣ್ಣು ಮಗು ಸತ್ತಿರುತ್ತಾಳೆಂದು ವರದಿಯಾಗಿದೆ. ಇದರ ಸಂಬಂಧವಾಗಿ ಯು.ಡಿ.ಆರ್. ಸಂಖ್ಯೆ ೬/೮೫ ಅಂಡರ್ ಸೆಕ್ಷನ್ ೧೭೪ ಸಿಆರ್‌ಪಿಸಿಯ ಪ್ರಕಾರ ಸಿರವಾರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆಯನ್ನು ದಾಖಲ್ಮಾಡಿಕೊಳ್ಳಲಾಗಿದೆ. ಇದು ದೊಡ್ಡ ಟಿಲಿಗ್ರಾಂ ಇದೆ, ಇದನ್ನು ಓದಿ ಹೇಳುತ್ತೇನೆ ; ಕೊನೆಯಲ್ಲಿ ಈ ರೀತಿ ಇದೆ :

> "Out of 41 persons affected one person by name Yellappa is a Harijan has sustained loss of Rs. 2,000 due to gutting his pushing cart which was parked at the place of fire accident. On 5-4-1985 Deputy Commissioner, Raichur visited the spot and distributed cooking utensils valued Rs. 11,000 from the TDB funds to the victims and he has also recommended Rs. 500 each from the Chief Minister's Relief Fund and also Rs. 4,000 to the deceased girls father Sri Shankarappa. He has also directed Tungabhadra Gramin Bank to give loans to the victims under the IRDP scheme."

ಶ್ರೀ ಬಸವರಾಜ ಪಾಟೀಲ್.— ಆ ಮಾಹಿತಿ ಸ್ವಲ್ಪ ತಪ್ಪಾಗಿ ಬಂದಿದೆ, ಸರಿಯಾದ ಮಾಹಿತಿ ನನ್ನ ಹತ್ತಿರ ಇದೆ.

ಕರ್ನಾಟಕ ಗಡಿ ಸಮಸ್ಯೆ ಬಗ್ಗೆ

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ನಾನು ಕಾಸರಗೋಡಿನ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಹೊಸ ಸದಸ್ಯರಿಗೆ ಅವಕಾಶ ಮಾಡಿಕೆ ಕೊಡಬೇಕು.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಸಲಹೆ ಕೊಟ್ಟರು. ಹೊಸ ಸದಸ್ಯರಿಗೆ ಅವಕಾಶಕೊಡಬೇಕು ಎಂದು ಹೇಳಿದರು. ಹೊಸ ಸದಸ್ಯರಿಗೆ ಅವಕಾಶ ಸಿಗಬೇಕು ಎನ್ನುವುದು ನನ್ನ ಅಭಿಪ್ರಾಯ ಹೊಸ ಸದಸ್ಯರ ಮನಸ್ಸಿಗೆ ನೋವು ಉಂಟು ಮಾಡಬೇಕು ಎನ್ನುವುದಲ್ಲ. ಹೊಸ ಸದಸ್ಯರಿಗೆ ಅವಕಾಶ ಜಾಸ್ತಿಕೊಡಬಹುದು, ಆ ಸಲಹೆ ಕೂಡ ಇದೆ. ಸರ್ಕಾರಕ್ಕೂ ಕೂಡ ಸಲಹೆ ಕೊಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಗಡಿ ವಿಚಾರದಲ್ಲಿ ನಾನು ಪ್ರಶ್ನೆ ಕಳಿಸಿದ್ದೆ. ಮುಖ್ಯ ಮಂತ್ರಿಗಳಿಲ್ಲ. ಅನಂತರ ತೆಗೆದುಕೊಳ್ಳೋಣ ಎಂದು ಹೇಳಿದ್ದರಿಂದ ಸುಮ್ಮನಾದೆ. ಮಾನ್ಯ ಮುಖ್ಯ ಮಂತ್ರಿಗಳು ಬೊಂಬಾಯಿಗೆ ಹೋದಾಗ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಗಡಿ ವಿಚಾರದಲ್ಲಿ ಚರ್ಚೆ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ನಾವು ಈ ಪ್ರಶ್ನೆಯನ್ನು ಎತ್ತುವುದಕ್ಕಿಂತ ಮೊದಲು ತಾವಾಗಿಯೇ ಯಾವ ರೀತಿ ಚರ್ಚೆ ಮಾಡಿದರು ಎಂದು ಈ ಸದನಕ್ಕೆ ಹೇಳಿಕೆ ಕೊಡಬೇಕಾಗಿತ್ತು. ಈ ಸಭೆಯಲ್ಲಿ ಮಹಾಜನ್ ಆಯೋಗದ ವರದಿ ಶಿಫಾರಸು ಏನಿದೆ ಆ ಶಿಫಾರಸನ್ನು ಒಪ್ಪಬೇಕು, ಅದಕ್ಕೆ ಬೆಂಬಲ ಕೊಡಬೇಕು ಎಂದು ಸರ್ವಾನುಮತದಿಂದ ತೀರ್ಮಾನ ಮಾಡಿದ್ದೇವೆ ಎನ್ನುವುದು ನನಗಿ ನೆನಪಿದೆ. ಅನಂತರ ಸದನದ ಅನೇಕ ನಿಯೋಗಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರತಕ್ಕದ್ದು ಮಾನ್ಯ ಬೊಮ್ಮಾಯಿಯವರಿಗೆ, ಮಾನ್ಯ ದೇವೆಗೌಡರಿಗೆ ಮತ್ತು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಯಾವ ರೀತಿ ಚರ್ಚೆ ಮಾಡಿದರು ಎನ್ನುವುದು ಸದನಕ್ಕೆ ಗೊತ್ತಾಗಬೇಕು. ಮತ್ತೊಂದು ವಿಷಯವೇನೆಂದರೆ ಶ್ರೀಮಾನ್

ವಸಂತದಾದಾ ಪಾಟೀಲರು ಮತ್ತೆ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಈಗ ಕೇಂದ್ರ ಸರ್ಕಾರದ ಜೊತೆಗೆ ಮಾತು ಕತೆಗೋಸ್ಕರ ಅವರೇ ನಿಯೋಗವನ್ನು ತೆಗೆದುಕೊಂಡು ಹೋಗುತ್ತಾರೆ ಎನ್ನುತಕ್ಕ ವರದಿ ಪತ್ರಿಕೆಯಲ್ಲಿ ಬಂದಿದೆ. ಆದರಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರೂ ಇದ್ದಾರೆ. ಈ ರೀತಿ ಅವರು ಕಾರ್ಯಕ್ರಮ ಹಾಕಿರಬೇಕಾದರೆ, ನಮ್ಮ ಸರ್ಕಾರದವರು ಅಂದರೆ ಮುಖ್ಯ ಮಂತ್ರಿಯಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನಮ್ಮ ಸರ್ಕಾರದ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವುದಕೋಸ್ಕರ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿದ್ದಾರೆ ಎನ್ನುವ ವಿಚಾರವಿದೆ. ಆದ್ದರಿಂದ ಈ ವಿಷಯದಲ್ಲಿ ಅವರೇ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಆದ್ದರಿಂದ ಈ ವಿಚಾರ ಸದನದ ಮುಖಾಂತರ ಕರ್ನಾಟಕ ರಾಜ್ಯದ ಜನತೆಗೆ ಗೊತ್ತಾಗಬೇಕು. ತಮ್ಮ ನಿಲುವು ವಿವಾದರೂ ಮಾರ್ಪಾಡು ಆಗಿದೆಯೇ, ಸರ್ಕಾರ ಮಾತುಕತೆಯಲ್ಲಿ ಮುಂದುವರಿದಿದೆಯೇ? ಮಾನ್ಯ ಮುಖ್ಯ ಮಂತ್ರಿಗಳು ಮಂತ್ರಾಲಯದ ಕಡೆ ಹೋಗಬೇಕು ಎಂದು ಹೇಳಿದ್ದರು. ಆದ್ದರಿಂದ, ಆ ರೀತಿ ಪರವಾಗಿ ಬೇರೆಯವರಿಗೆ ಅಧಿಕಾರ ಕೊಟ್ಟಿದ್ದಾರೆಯೇ ಇಲ್ಲವೇ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಗಡಿ ವಿಚಾರದಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆ ಮಾತುಕತೆ ಮಾಡುವ ಮೊದಲು ಡೆಲ್ಲಿಯಲ್ಲಿ ನಮ್ಮ ರಾಜ್ಯದ ಲೋಕಸಭೆ ಸದಸ್ಯರ ಸಭೆಯನ್ನು ಮುಖ್ಯ ಮಂತ್ರಿಗಳು ಕರೆದಿದ್ದರು. ಆ ಸಭೆಯಲ್ಲಿ ಏನು ಮಾತನಾಡಬೇಕೆಂದು ಚರ್ಚೆಯಾಗಿದೆ. ಅವರ ಸಲಹೆಗಳನ್ನು ತೆಗೆದುಕೊಂಡಿದ್ದಾರೆ. ಇದರ ಜೊತೆಗೆ ಎರಡೂ ಸದನಗಳ ನಿರ್ಣಯವಾಗಿದೆ ಈ ಆಧಾರದ ಮೇಲೆ ಹೇಳುವುದಾದರೆ ಮೊದಲನೆಯ ಸಭೆ ನಡೆದಾಗ ಹೆಚ್ಚಿನ ಚರ್ಚೆಯಾಗಲಿಲ್ಲ. ಮೊದಲನೆಯ ಸಭೆಯಲ್ಲಿ ಕೂಡಬೇಕು, ಮಾತನಾಡಬೇಕು ಎಂದು ವ್ಯಕ್ತವಾಯಿತು. ಎರಡನೆಯ ಸಭೆ ನಡೆದಾಗ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಿದರು. ಪಂಚಾಯತ್ ಕಮಿಷನ್ ಚೌಕಟ್ಟಿನಲ್ಲಿ ನಮ್ಮ ಉಭಯ ಸದನಗಳ ನಿರ್ಣಯದ ಪ್ರಕಾರ ಚರ್ಚೆ ಮಾಡುವುದನ್ನು ನಮ್ಮ ಮುಖ್ಯ ಮಂತ್ರಿಗಳು ಹೇಳಿದರು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಅವರ ಉಭಯ ಸದನಗಳ ನಿರ್ಣಯ ಏನಿದೆ ಅದರ ಚೌಕಟ್ಟಿನಲ್ಲಿ ಮಾತನಾಡತಕ್ಕ ಮಾತನ್ನು ಹೇಳಿದರು. ಇದು ಆದಮೇಲೆ ಈ ಗಡಿಪ್ರದೇಶದಲ್ಲಿರತಕ್ಕ ಜನರು ಏನಿದ್ದಾರೆ ಅವರಿಗೆ ಅನೇಕ ತೊಂದರೆಗಳು ಇವೆ ಎಂದು ನಮ್ಮ ರಾಜ್ಯ ಸರ್ಕಾರಕ್ಕೆ ಸೊಲ್ಲಾಪುರ ಆಫಜಲ್‌ಪುರ ಭಾಗದಿಂದ ಅನೇಕ ಮನವಿಗಳು ಬಂದಿವೆ. ಆ ಭಾಗದಲ್ಲಿ ಕುಡಿಯುವ ನೀರಿನ ಸೌಲಭ್ಯ, ರಸ್ತೆ ಕೆಲಸಗಳು, ವಿದ್ಯುಚ್ಛಕ್ತಿ ಸೌಲಭ್ಯ, ಅಭಿವೃದ್ಧಿ ಕಾರ್ಯಗಳು ನಿಂತಿವೆ ಕನ್ನಡ ಶಾಲೆಗಳು ಮುಚ್ಚಿವೆ, ಕನ್ನಡ ಕಲಿಸತಕ್ಕ ಟೀಚರ್‌ಗಳು ಇಲ್ಲ ಎನ್ನುವ ಮನವಿಗಳು ಬಂದಿವೆ, ಎನ್ನುವ ಪ್ರಶ್ನೆಯನ್ನು ಮುಖ್ಯಮಂತ್ರಿಗಳು ಎತ್ತಿಕೊಂಡರು. ಎರಡೂ ಸರ್ಕಾರಗಳ ಅಧಿಕಾರಿಗಳ ಒಂದು ಸಮಿತಿ ನೇಮಿಸಬೇಕು ಅವರು ಗಡಿಯ ಎರಡು ಭಾಗದಲ್ಲೂ ಪ್ರವಾಸ ಮಾಡಿ ಅಲ್ಲಿ ಜನರಿಗೆ ಇರತಕ್ಕ ತೊಂದರೆಗಳು ಏನು ಇವೆ ಅದನ್ನು ಮೊದಲು ನಿವಾರಣೆ ಮಾಡಲಿಕ್ಕೆ ಸಲಹೆ ಸೂಚನೆ ಕೊಡಬೇಕೆಂದು ಆಯಿತು. ಈ ಮಾತುಕತೆ ಪ್ರಕಾರ ಅಡಿಷನಲ್ ಚೀಫ್ ಸೆಕ್ರೆಟರಿ ಅಧ್ಯಕ್ಷತೆಯಲ್ಲಿ ಮಹಾರಾಷ್ಟ್ರದ ಸಮಿತಿ, ಮತ್ತು ನಮ್ಮ ಅಡಿಷನಲ್ ಸೆಕ್ರೆಟರಿ ಮತ್ತು ಹೋಮ್ ಸೆಕ್ರೆಟರಿಯವರ ನ್ನೊಳಗೊಂಡಂತೆ ಒಂದು ಕಮಿಟಿ ಆಯಿತು. ಆ ಕಮಿಟಿಯವರು ಎರಡೂ ಕಡೆ ಭೇಟಿಕೊಟ್ಟು ವರದಿಯನ್ನು ಕೊಟ್ಟಿದ್ದಾರೆ. ಗಡಿ ಭಾಗದಲ್ಲಿ ಇದ್ದ ಸಮಸ್ಯೆಗಳ ಅಭಿವೃದ್ಧಿ ಕಾರ್ಯ ವಿದ್ಯಾ ಇಲಾಖೆಯಲ್ಲಿರತಕ್ಕ ತೊಂದರೆಗಳ ನಿವಾರಣೆ ಮಾಡಲಿಕ್ಕೆ ವರದಿಯಲ್ಲಿ ತಿಳಿಸಿದ್ದಾರೆ. ಪುನಃ ಇದು ಆದಮೇಲೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬೆಂಗಳೂರಿಗೆ ಬರತಕ್ಕ ಕಾರ್ಯಕ್ರಮ ಬಂತು. ಆಗ ಕೂಡ ವಿರೋಧ ಪಕ್ಷದ ಎಲ್ಲ ನಾಯಕರನ್ನು ಕರೆಸಿ ಹಿಂದಿನ ದಿವಸ ಮಾತುಕತೆ ನಡೆಯಿತು. ಅದರ ಜೊತೆಗೆ ಬೇರೆ ಬೇರೆ ಕನ್ನಡ ಚಳುವಳಿ ನಾಯಕರನ್ನು ಕರೆದಿದ್ದರು. ಚರ್ಚೆ ಆದಮೇಲೆ ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ಜೊತೆ ಮಾತುಕತೆ ಆಯಿತು. ಮುಂದೆಯೇ ಚುನಾವಣೆ ಬಂತು. ಚುನಾವಣೆ ಆದಮೇಲೆ ಅಲ್ಲಿ ಶ್ರೀಮಾನ್ ವಸಂತದಾದ ಪಾಟೀಲ್ ಅವರು ಮುಖ್ಯ ಮಂತ್ರಿಗಳು ಆಗಿದ್ದಾರೆ, ಇಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳು ಆಗಿದ್ದಾರೆ. ಮೊನ್ನೆ ಮುಂಬಯಿಗೆ ಹೋದಾಗ ಕರ್‌ಟಸಿ ಕಾಲ್ ಎರಡು ಮೂರು ನಿಮಿಷ ಆಗಿರಬಹುದು ಅಷ್ಟೆ. ಈ ಮಧ್ಯೆ ಹೊಸ ಸಂಗತಿ ನಡೆದಿದೆ. ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಮಾತನಾಡುವಾಗ ಕರ್ನಾಟಕದ ಮುಖ್ಯಮಂತ್ರಿಗಳ ಜೊತೆ ಮಾತನಾಡ ಕೂಡದು ಎನ್ನುವ ವಾದವನ್ನು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಮೇಲೆ ಅಲ್ಲಿಯ ಶಾಸಕರು ಒತ್ತಾಯ ಮಾಡಿದ್ದಾರೆ. ಆದರೂ ಆದಮೇಲೆ ಮಾತುಕತೆ ನಡೆದಿಲ್ಲ. ಈ ಗಡಿ ವಿಚಾರದಲ್ಲಿ ಉಭಯ

ಸದನಗಳ ನಿರ್ಣಯ ಮತ್ತು ಈವರೆಗೆ ಕರ್ನಾಟಕ ಸರ್ಕಾರದಲ್ಲಿ ಮೇಲಿಂದ ಮೇಲೆ ತೆಗೆದುಕೊಂಡಂಥ ನಿರ್ಣಯವನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎನ್ನುವ ಭರವಸೆಯನ್ನು ನಾನು ಈ ಸಭೆಗೆ ಕೊಡುತ್ತೇನೆ. ಮಹಾಜನ್ ಕಮಿಷನ್ ಪ್ರಕಾರವೇ ಮಾತುಕತೆ ನಡೆಯುತ್ತದೆ. ಮುಂದೆ ಏನಾದರೂ ಮಾತುಕತೆ ನಡೆಯುವ ಕಾಲ ಬಂದರೆ ಸಂಬಂಧಪಟ್ಟ ಎಲ್ಲಾ ವಿರೋಧ ಪಕ್ಷಗಳ ನಾಯಕರನ್ನು ಕರೆದು ಅವರ ಅಭಿಪ್ರಾಯ ಪಡೆದು ಮಾತುಕತೆ ಮಾಡತಕ್ಕ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಭಾಷಣ ಆಲ, ಸಂಖ್ಯಾತರ ಆಯೋಗ ಏನಿದೆ ಅದು ತನ್ನ ವಾರ್ಷಿಕ ವರದಿಯನ್ನು ಪ್ರತಿ ವರ್ಷ ಕೊಡುತ್ತದೆ ಎನ್ನುವ ಭಾವನೆ ಇದೆ. ಆ ವಾರ್ಷಿಕ ವರದಿಯ ಶಿಫಾರಸ್ಸು ಕರ್ನಾಟಕ ರಾಜ್ಯದಲ್ಲಿರತಕ್ಕ ಭಾಷಾ ಅಲ್ಪ ಸಂಖ್ಯಾತರ ಬಗ್ಗೆ ಸ್ಕೂಲು ಮಾಡುವುದು ಅಧ್ಯಾಪಕರ ನೇಮಕಾತಿ ಪ್ರಶ್ನೆ, ಪಾಠಪ್ರವಚನ, ಪುಸ್ತಕಗಳನ್ನು ಓದಿಸುವ ಬಗ್ಗೆ ಇರಬಹುದು. ಈ ವಿಚಾರದಲ್ಲಿ ನಮ್ಮ ಸರ್ಕಾರ ಲಿಂಗ್ವಿಸ್ಟಿಕ್ ಮೈನಾರಿಟೀಸ್ ಕಮಿಷನ್ ವರದಿಯನ್ನು ಮೆಚ್ಚಿದೆ. ಅದೇ ರೀತಿ ಮಹಾರಾಷ್ಟ್ರದ ಗಡಿಯಲ್ಲಿರತಕ್ಕ ಕನ್ನಡ ಶಾಲೆಗಳು ಇರಬಹುದು, ಅವರಿಗೆ ಸೌಲಭ್ಯಗಳು ಎಷ್ಟು ಸಿಕ್ಕಿದೆ, ಅಧಿಕಾರಿಗಳ ಮಟ್ಟದ ಸಭೆ ಇರಬಹುದು ಅಲ್ಲಿ ನಮ್ಮ ಬೇಡಿಕೆ ಎಷ್ಟು ಇದೆ ಕನ್ನಡ ಶಾಲೆಗಳನ್ನು ಮಾಡಿದಂತಾದ್ದಕ್ಕೆ ಮಹಾರಾಷ್ಟ್ರ ಸರ್ಕಾರ ಎಷ್ಟು ಸೌಲಭ್ಯ ಕೊಟ್ಟಿದೆ. ನಮ್ಮ ಸರ್ಕಾರ ಕೊಟ್ಟಿರುವುದು ಎಷ್ಟು ಅದರ ಬಗ್ಗೆ ಮಾತುಕತೆ ಮಾಡಿ ನಾನು ಬೇಡ ಎಂದು ಹೇಳುವುದಿಲ್ಲ. ಏಕೆಂದರೆ ನಮ್ಮ ಭಾಷಾ ಅಲ್ಪ ಸಂಖ್ಯಾತರಿಗೆ ಸೌಲಭ್ಯ ಕೊಡದೇ ಇದ್ದರೆ ಅವರ ಮಕ್ಕಳಾಗಲಿ ನಮ್ಮ ಮಕ್ಕಳಾಗಲಿ ಗತಿ ಏನು, ಮಾತುಕತೆ ಮಾಡುವುದರ ಬಗ್ಗೆ ಅಭ್ಯಂತರವಿಲ್ಲ, ಸೌಲಭ್ಯ ಕೊಡುವ ದುಷ್ಟಬುದ್ಧಿಯಿಂದ ಮಾತ್ರ ಮಾಡಬೇಕು. ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕೊಟ್ಟಿರತಕ್ಕ ಸೌಲಭ್ಯಗಳ ಬಗ್ಗೆ ಅಂಕಿಅಂಶಗಳ ಬಗ್ಗೆ ವರದಿಯನ್ನು ಸಂಪೂರ್ಣವಾಗಿ ಸದನದ ಮುಂದೆ ಇಡಬೇಕು. ಜೂನ್, ಜುಲೈ ತಿಂಗಳಿನಲ್ಲಿ ಮತ್ತೆ ಸದನ ಸೇರುತ್ತದೆ ಆ ಪ್ಪರಲ್ಲಿ ಮಾತುಕತೆಯಲ್ಲಿ ಏನು ಪ್ರಗತಿಯಾಗಿರುತ್ತದೆ ಅಷ್ಟು ವರದಿಯನ್ನು ಈ ಸದನದ ಮುಂದೆ ಇಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI R. S. MANE.—Sir, the Hon. Minister for Revenue Sri S. R. Bommai stated that the talks are going on within the Mahajan Commission framework *i.e.*, Mahajan Commission Choukat. What is that Choukat? Whether anybody in the House has studied the Mahajan Commission Report and whether that Mahajan Commission has any Choukat at all? I would like to know from the Hon. Minister for Revenue, whether the Karnataka Government is still desirous to pursue talks on boundary problem with the Chief Minister of Maharashtra and whether it is a fact that the Hon. Chief Minister of Karnataka on 17th January, 1984 while answering a question to the Press in Bombay made a statement that this Border Dispute now has not remained a dispute between the two States but it has gone to the level of National Problem. What is the effect of that statement? What is the stand taken by the Hon. Chief Minister of Maharashtra on this statement? You say that you will continue talks within the Mahajan Commission framework. Whether the Chief Minister of Maharashtra has agreed to this proposal and if he has not agreed, then what is the point in pursuing the talks? Let the matter be resolved at the Centre. The matter here, as stated by the Hon. Chief Minister, has now ceased to be a Boundary Dispute. It is a dispute of National level, and therefore, let the Central Government solve it. Why do you waste time? We have won seven consecutive elections in all the five Constituencies. Last time election was a

record. Against the lone M. E. S. candidate, 301 candidates contested. Still the MES candidate was elected by 11,000 and odd votes by defeating 300 candidates. According to my information it has gone into the 'Guinness Book of World Records'. Is there any value to the wishes of the people? The Janata Party do poses that it respects the wishes of the people and that it is a Government of the people. Why don't they respect the wishes of the people expressed through the Elections in all these Seven consecutive Elections?

5—00 P. M.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಹಿಂದಿನೇ ನಿಯಮದಮೇರೆಗೆ ಕಾಸರಗೋಡಿನ ವಿಚಾರದಲ್ಲಿ ದಿನಾಂಕ ೩-೪-೧೯೮೫ರ ಸಂಜೆವಾಣಿ ಪತ್ರಿಕೆಯಲ್ಲಿ ನಮ್ಮ ಶಿಕ್ಷಣ ಸಚಿವರು ಕೊಟ್ಟ ಹೇಳಿಕೆಯ ಬಗ್ಗೆ ಕೇರಳದ ಮುಖ್ಯ ಮಂತ್ರಿಯಂವರು ನೀಡಿದ ನಿವಾರ್ಯ ಕಾಗೆ ಸರ್ಕಾರದ ಗಮನ ಸೆಳೆಯುತ್ತೇನೆ. ಆಲ್ಲದೆ, ಬೀದರ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಇನ್ನು ಮುಂದೆ ಗಡಿ ಪ್ರಶ್ನೆ ಇಲ್ಲವೇ ಇಲ್ಲ ಎಂದು ಹೇಳಿದ್ದಾರೆ, ಆ ಸಂದರ್ಭದಲ್ಲಿ ವಾನ್ಯ ಮಂತ್ರಿಯವರು ಉಪಸ್ಥಿತರಿದ್ದರು. ಗಡಿ ವಿಚಾರದಲ್ಲಿ ಸರ್ಕಾರದ ಸ್ಪಷ್ಟ ನಿಲುವು ಏನೂ ಎಂಬುದನ್ನು ತಮ್ಮ ಮೂಲಕ ಸರ್ಕಾರದವರನ್ನು ಕೇಳುವುದಕ್ಕೆ ಇಚ್ಚಿಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಪದೇ ಪದೇ ಈ ಗಡಿ ವಿಚಾರವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಕರ್ನಾಟಕ ಸರ್ಕಾರದ ನಿಲುವು ಒಂದೇ ಒಂದು ಅದು ಮಹಾಜನ್ ಕಮೀಷನ್ ವರದಿಯನ್ನು ಜಾರಿಗೆ ತರಬೇಕು. ಮಹಾಜನ್ ಕಮೀಷನ್ ನೇಮಿಸಬೇಕೆಂದು ಕೇಳಿದವರು ನಾವಲ್ಲ ಮಹಾರಾಷ್ಟ್ರ ಸರ್ಕಾರದ ಅಂದಿನ ಮುಖ್ಯಮಂತ್ರಿಗಳ ಇಚ್ಚೆ ಪ್ರಕಾರ ನೇಮಿಸಲ್ಪಟ್ಟಿತು. ತನ್ನ ವರದಿಯನ್ನು ಕೂಡ ಅದು ಕೊಟ್ಟಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯದ ಪ್ರಕಾರ ಅಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ವೈ.ಬಿ. ಚವಾಣ್‌ರವರು ಮತ್ತು ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಸ್ಪಷ್ಟವಾದ ನಿಲುವು ಅಂದರೆ ಎರಡು ಸರ್ಕಾರದ ಮೇಲೆ ಮಹಾಜನ್ ತೀರ್ಪು ಜಾರಿಗೆ ಬರಬೇಕೆಂಬುದನ್ನು ಅಂದೇ ಒಪ್ಪಿಕೊಂಡಿದ್ದಾರೆ. ಎಂ. ಇ. ಎಸ್.ನವರು ಪ್ರಶ್ನೆ ಎತ್ತಿದ್ದಾರೆ. ಮುಖ್ಯಮಂತ್ರಿಯವರನ್ನು ಕಂಡು, ಪ್ರಧಾನ ಮಂತ್ರಿಯವರನ್ನು ಕಂಡು ಲೋಕಸಭೆಯ ಮಂಂದಿಟ್ಟು, ಕೇಂದ್ರಸರ್ಕಾರ ಇದರ ಬಗ್ಗೆ ತೀರ್ಮಾನ ಮಾಡಬೇಕೆಂದು ಒತ್ತಾಯ ಮಾಡಿದ್ದಾರೆ. ಕೇಂದ್ರಸರ್ಕಾರ ತೀರ್ಮಾನ ತೆಗೆದುಕೊಳ್ಳಬಹುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯ ಏನಿದೆ ಅದನ್ನು ಜಾರಿಗೆ ತರಬೇಕು. ಮತ್ತೆ ಕಾಸರಗೋಡಿನ ವಿಚಾರದಲ್ಲಿಯೂ ಅಷ್ಟೇ. ಕಾಸರಗೋಡು ತಾಲ್ಲೂಕು, ೮ ಹಳ್ಳಿಗಳನ್ನು ಬಿಟ್ಟು ಕರ್ನಾಟಕಕ್ಕೆ ಸೇರಬೇಕೆಂದು ಪರದಿಯಲ್ಲಿ ಇದೆ ಸರ್ಕಾರದ ನಿಲುವು ಕೂಡ ಅದೇ ಆಗಿದೆ ಕೇರಳದ ಮುಖ್ಯಮಂತ್ರಿಯವರು ಆ ರೀತಿ ಹೇಳುವುದಕ್ಕೆ ಅಧಿಕಾರ ಇಲ್ಲ. ಕಾಸರಗೋಡು ನಮಗೆ ಸೇರಬೇಕೆಂದು ಒತ್ತಾಯ ಮಾಡುತ್ತೇವೆ, ಕೇಂದ್ರದ ಮೇಲೆ ಪುನಃ ಒತ್ತಾಯ ತರುತ್ತೇವೆ.

SRI R. S. MANE.— Sir, the Hon'ble Minister has stated that Kasaragod will come to Karnataka. How many years it will take?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಹಾಜನ್ ವರದಿ ಪ್ರಕಾರ ಬೆಳಗಾಂ ನಮಗೆ ಬರ ಬೇಕು, ಕಾಸರಗೋಡು ನನಗೆ ಬರಬೇಕು.

ಶ್ರೀ ಎಸ್ ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ ಬರಗಾಲದ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಮೊದಲು ನನ್ನ ಒಂದು ಸಣ್ಣ ಹೇಳಿಕೆಯ ಕಾಪಿಗಳನ್ನು ಮಾನ್ಯ ಸದಸ್ಯರಿಗೆ ಕಳು ಹಿಸಿದ್ದೇನೆ. ಕೇಂದ್ರಸರ್ಕಾರಕ್ಕೆ ಬರಗಾಲದ ಬಗ್ಗೆ ನಾವು ಮಾಡಿ ಕೊಟ್ಟ ಮೇಲೆ ಏನೇ ತೀರಿಮಿ

ಕೇಂದ್ರದ ತಂಡ ನಮ್ಮ ರಾಜ್ಯಕ್ಕೆ ಬರುತ್ತಿದೆ. ಕೇಂದ್ರದ ತಂಡ ಎಲ್ಲೆಲ್ಲಿ ಭೇಟಿ ನೀಡಲಿದೆ ಎನ್ನುವ ವಿವರ ಇರತಕ್ಕ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಗಿದೆ. ರಾಜ್ಯದ ೯ ಜಿಲ್ಲೆಗಳಲ್ಲಿ ತಂಡ ಪ್ರವಾಸ ಮಾಡುತ್ತದೆ. ಅನೇ ತಾರೀಖಿನಿಂದ ಮೂರು ದಿವಸಗಳ ಕಾಲ ಪ್ರವಾಸ ಮಾಡುತ್ತದೆ. ತಂಡದವರು ಯಾವ ಯಾವ ಭಾಗಕ್ಕೆ ಬರುತ್ತಾರೆ. ಆಯಾಯಾ ಭಾಗದ ಸದಸ್ಯರು ಬರಗಾಲದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವುದರ ಜೊತೆಗೆ ಕೇಂದ್ರದ ತಂಡದೊಡನೆ ಸಹಕಾರ ನೀಡಬೇಕು. ತಾವು ಗಳೆಲ್ಲರೂ ಖುದ್ದು ಹಾಜರಿದ್ದು ಪರಿಸ್ಥಿತಿಯ ಗಂಭೀರತೆಯ ನ್ನು ಕೇಂದ್ರದ ತಂಡಕ್ಕೆ ಮನವರಿಕೆ ಮಾಡ ಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರ ಈಗಾಗಲೇ ಎನ್.ಆರ್.ಇ.ಪಿ. ಯೋಜನೆಗೆ ಮೇರೆಗೆ ೨.೨೫ ಲಕ್ಷ ಪಬ್ಲಿಕ್ ಹೆಲ್ತ್ ಯೋಜನೆಯಲ್ಲಿ ೧.೫೦ ಲಕ್ಷ ಕುಡಿಯುವ ನೀರಿಗಾಗಿ ೫೦ ಲಕ್ಷ, ಹಳ್ಳಿಗಳಿಗೆ ಮತ್ತು ನಗರ ಪ್ರದೇಶಗಳಿಗೆ ೫೦ ಲಕ್ಷ ಒಟ್ಟು ೪.೫೫ ಲಕ್ಷ ರೂಪಾಯಿಗಳನ್ನು ಕಿಡುಗಡೆ ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಮುಖ್ಯಮಂತ್ರಿಯವರ ಪ್ರೋಗ್ರಾಂ ನಮ್ಮ ಕಡೆ ಇಲ್ಲವೇ ಇಲ್ಲ.

ಶ್ರೀ ಧರ್ಮಸಿಂಗ್.— ಬಹಳಷ್ಟು ಕ್ಷೇತ್ರಗಳನ್ನು ಬಿಟ್ಟು ಬಿಟ್ಟಿದ್ದಾರೆ. ಗುಲ್ಬರ್ಗ ಜಿಲ್ಲೆಯ ಅಫಜಲ್‌ಪುರ ಕ್ಷೇತ್ರ ಇದರಲ್ಲಿ ಬರಬೇಕಾಗಿತ್ತು. ಜನತಾ ಶಾಸಕರು ಬಂದಿರುವ ಕಡೆ ಮಾತ್ರ ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನೀವು ಮಾತನಾಡುವಾಗ ವಿಷಯ ಹೇಳಿ. ಪ್ರವಾಸ ಕಾರ್ಯ ಕ್ರಮದಲ್ಲಿ ತಪ್ಪಿದೆ ಎಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ.— ಬರಗಾಲ ವಿಚಾರ ಬಹಳ ಮುಖ್ಯವಾದುದು. ಇದು ೧೦--೧೪ ಜಿಲ್ಲೆಗಳಿಗೆ ಸಂಬಂಧಪಟ್ಟ ವಿಚಾರ. ಹೆಚ್ಚಿನ ಹೊತ್ತಿನವರೆಗೆ ಕೂತು ಚರ್ಚೆ ಮಾಡೋಣ.

ಬರಗಾಲ ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಂಡರೆ, ಬೇರೆ ವಿಚಾರವನ್ನು ಮಧ್ಯದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದಲ್ಲ. ನಾನು ಪ್ರಸ್ತಾಪ ಮಾಡತಕ್ಕ ವಿಚಾರವೇನೆಂದರೆ .....

ಅಧ್ಯಕ್ಷರು.—ನಿಯಮ ೩೩೪ರ ಕೆಳಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ, ಮಂತ್ರಿಗಳು ಉತ್ತರವನ್ನು ಆ ಮೇಲೆ ಕೊಡಲಿ.

ಅಧ್ಯಕ್ಷರು.—ಹಾಗಿದ್ದರೆ ಅಡ್ಡಿಯಿಲ್ಲ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೆ...

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡತಕ್ಕ ದ್ದನ್ನು ನಾನು ವಿರೋಧ ಮಾಡುತ್ತೇನೆ. ಮಾನ್ಯ ಬಂಗಾರಪ್ಪನವರು ನಮ್ಮ ಬಗ್ಗೆ ಸಹಕರಿಸಬೇಕು, ಇದರ ಬಗ್ಗೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡಬೇಕು.

SRI S. BANGARAPPA.—How can you allow 334 after discussion on Scarcity conditions? I can't understand this.

ಅಧ್ಯಕ್ಷರು.—ಆಮೇಲೆ ಉತ್ತರ ಕೊಡುವುದು, ಈಗ ತಾವು ಪ್ರಸ್ತಾಪ ಮಾಡುವುದು ಚೆನ್ನಾ ಗಿರಬಹುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿಕ್ಕೆ ಶುರು ಮಾಡಿದರೆ ಜಾಸ್ತಿ ಸಮಯವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆಮಾಡುವಾಗ ಮಧ್ಯದಲ್ಲಿ ನಿಯಮ ನಿಯಮ ೫೩ರ ಪ್ರಕಾರ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ತಾವೇನು ನೋಟೀಸ್ ಕೊಟ್ಟಿದ್ದೀರಿ ಅದನ್ನು ಓದಿ ಸಾಕು.

ಸರ್ಕಾರಿ ಮುಖ್ಯ ಸಚೇತಕ ಶ್ರೀ ರಾಜವರ್ಧನ್‌ರವರ ಮಂಡಿಯು ವಿಚಾರದ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ನಿಯಮ ನಿಯಮ ೫೩ರ ಪ್ರಕಾರ ಒಂದು ವಿಷಯವನ್ನು ಕಳುಹಿಸಿ ಕೊಟ್ಟಿದ್ದೇನೆ. ಅದು ಸರ್ಕಾರಿ ಮುಖ್ಯ ಸಚೇತರಾದ ಶ್ರೀ ರಾಜವರ್ಧನ ಅವರಿಗೆ ಸಂಬಂಧಪಟ್ಟ ವಿಚಾರ. ಇದು ಆ ಸದನದಲ್ಲೂ ಕೂಡ ಚರ್ಚೆಯಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ನನ್ನ ಕ್ರಿಯಾಲೋಪ ಏನೆಂದರೆ ಸರ್ಕಾರಿ ಮುಖ್ಯ ಸಚೇತಕರಿಗೆ ಸಂಬಂಧಪಟ್ಟಂತಹ ವಿಚಾರ ಕೋರ್ಟ್‌ನಲ್ಲಿದೆ. ಅದನ್ನು ಇಲ್ಲಿ ಚರ್ಚೆ ಮಾಡಿದರೆ ಸಬ್-ಜ್ಯುಡಿಶ್ ಆಗುತ್ತದೆ. ಕೋರ್ಟ್‌ನಿಂದ ನಿರ್ಣಯ ಏನು ಬರುತ್ತದೆ ಎಂಬುದು ಗೊತ್ತಿಲ್ಲ. ನ್ಯಾಯಲಯಾದ ಮುಂದೆ ವಿಚಾರವಿರುವಾಗ ಅದನ್ನು ಇಲ್ಲಿ ಚರ್ಚೆ ಮಾಡುವುದೂ ಸೂಕ್ತವಲ್ಲ. ಆದಕ್ಕಾಗಿ ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಹೇಳಬಯಸುತ್ತೇನೆ, ನ್ಯಾಯಲಯಾದಲ್ಲಿರತಕ್ಕ ಸೂಕ್ಷ್ಮ ವಿಚಾರದ ಬಗ್ಗೆ ಎತ್ತ ಕೂಡದು, ಅದು ಸಬ್-ಜ್ಯುಡಿಸ್ ಆಗುತ್ತದೆ. ಅದಕ್ಕೆ ತಾವು ದಯವಿಟ್ಟು ಅಪ್ಪಣೆ ಕೊಡಬಾರದು.

Mr. SPEAKAR.— This is a matter pending before the court. ಯಾವುದೇ ವಿಷಯ ಕೋರ್ಟ್‌ನಲ್ಲಿ ಪೆಂಡಿಂಗ್ ಇರುವಾಗ ನಿಯಮ ನಿಯಮ ೫೩ರ ಪ್ರಕಾರ ಇಲ್ಲಿ ಪ್ರಸ್ತಾಪ ಮಾಡಬಾರದು. ತಮ್ಮ ನೋಟೀಸ್ ಏನಿದೆ ಅದನ್ನು ಓದಿ, ಆಮೇಲೆ ತೀರ್ಮಾನ.

SRI. S. BANGARAPPA.—"There have been reports that have appeared in news papers about Sri Rajavardhan, Government Chief Whip and an Ex-Minister wherein serious allegations are made that he married a second wife by name Smt. Indira and afterwards not only physically ill-treated her but also claimed to have said that she is only a kept-Mistress and not a wife, The question of giving full protecation is also involved for that lady. Also, the propriety of Sri Rajavardhan to continue as Govt. Chief Whip is involved, Hence the matter."

ಅಧ್ಯಕ್ಷರು.—ಈಗ ತಾವು ಓದಿದ್ದೀರಿ, ತಾವು ಸ್ವಲ್ಪ ಸುಮ್ಮನಿರಿ. ಮಂತ್ರಿಗಳು ಏನು ಹೇಳುತ್ತಾರೆ ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಸಿವಿಲ್ ಕೋರ್ಟ್ ಜಡ್ಜ್‌ಮುಂದೆವಿಚಾರಣೆ ನಡೆಯುತ್ತದೆ. ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ಇದಕ್ಕೆ ಸಂಬಂಧಪಟ್ಟ ಗೃಹ ಮಂತ್ರಿಗಳು ಆ ಮನೆದೆಯ್ದಿದ್ದಾರೆ. ಹೆಚ್ಚಿನ ವಿಷಯ ಹೇಳುವ ಅವಶ್ಯವಿಲ್ಲ, ದಯವಿಟ್ಟು ಅಧ್ಯಕ್ಷರು ಇದರ ಬಗ್ಗೆ ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ನಿಯಮ ನಿಯಮ ೫೩ರ ಪ್ರಕಾರ you have brought the matter to the notice of this august House. ವಿಷಯ ಕೋರ್ಟ್‌ವಂದೆ ಇದೆ, ಅದನ್ನು ಚರ್ಚೆ ಮಾಡಿದರೆ ಸಬ್ ಜ್ಯುಡೀಸ್ ಆಗುತ್ತದೆ ಎನ್ನುವ ವಿಚಾರವನ್ನು ಮಂತ್ರಿಗಳು ಹೇಳಿದ್ದಾರೆ. ತಾವು ಇನ್ನು ಮುಂದೆ ಹೇಳುವ ಅವಶ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನೂ ಹೇಳತಕ್ಕ ವಿಷಯ ಕೋರ್ಟ್‌ನಲ್ಲಿ ಇಲ್ಲದೇ ಇರತಕ್ಕ ವಿಷಯವನ್ನು ಹೇಳುತ್ತೇನೆ, ದಯವಾಡಿ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ಕೋರ್ಟ್‌ನಲ್ಲಿ